

# ಸಿನಿನಿರ್ದೇಶಕ, ಕತೆಗಾರ, ಕಾದಂಬರಿಕಾರ ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ಸಂದರ್ಶಿಸಿದ್ದಾರೆ ರಘುನಾಥ ಚ.ಹ.

ಚಿತ್ರಗಳು: ಆನಂದ ಬಕ್ಷಿ

ಒಂದು ತಲೆಮಾರಿನ ತರುಣ ತರುಣಿಯರಿಗೆ ರಮ್ಯ ರೋಚಕ ಕನಸುಗಳನ್ನು ಕೊಟ್ಟ ಕಥೆಗಾರ, ಸಾವಿರಾರು ವಿದ್ಯಾರ್ಥಿಗಳಿಗೆ ಪಾಠ ಹೇಳಿದ ಮೇಷ್ಟ್ರು, ಕನ್ನಡ ಚಿತ್ರರಂಗಕ್ಕೆ ಅಮೆರಿಕವನ್ನು ಹತ್ತಿರವಾಗಿಸಿದ ಸಿನಿಮಾ ನಿರ್ದೇಶಕ – ನಾಗತಿಹಳ್ಳಿ ಚಂದ್ರಶೇಖರ ಅವರ ಬಗ್ಗೆ ಮಾತನಾಡಲು ಹೊರಟರೆ ಅವರ ವ್ಯಕ್ತಿತ್ವದ ಹಲವು ಮುಖಗಳು ಒಂದರ ಮೇಲೊಂದು ಮುನ್ನೆಲೆಗೆ ಬರಲು ಪ್ರಯತ್ನಿಸುತ್ತವೆ. ಬೆಂಗಳೂರಿನ ಬನಶಂಕರಿ ಬಿಡಿಎ ಕಾಂಪ್ಲೆಕ್ಸ್‌ಗೆ ಕೂಗಳತೆ ದೂರದಲ್ಲಿರುವ ಅವರ 'ಟೆಂಟ್ ಶಾಲೆ'ಗೆ ಹೋದಾಗ, ಸಂದರ್ಶನಕ್ಕೆಂದು ಎದುರಿಗೆ ಕೂತವರಲ್ಲಿ ಮೊದಲಿಗೆ ಹಣಕಿದ್ದು ಅಲೆಮಾರಿಯ ಮುಖ. ಜಪಾನ್‌ನಿಂದ ತಂದಿದ್ದ 'ಶಕುಹಚಿ' ಎನ್ನುವ ಕೊಳಲು ರೀತಿಯ ವಾದ್ಯವನ್ನು ನೇವರಿಸುತ್ತ, ಜಪಾನ್ ಪ್ರವಾಸದ ಅನುಭವಗಳನ್ನು ನೆನಪಿಸಿಕೊಳ್ಳತೊಡಗಿದರು. 'ಸಿನಿಮಾ ನಿರ್ದೇಶಕ ಅಕಿರಾ ಕುರೋಸಾವಾ ಇಂದಿನ